ದಿನಾಂಕಃ **30.08.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

01. ನನ್ನ ಸ್ವಂತ ಊರು ಮಾಗಳ ಗ್ರಾಮ. ನಾನು ವ್ಯವಸಾಯ ಮಾಡುತ್ತೇನೆ. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಪ್ರತಿವಾದಿ ಚನ್ನಬಸಪ್ಪ ಹೇಗೆ ಪರಿಚಯಸ್ಥ? ಎಂದರೆ ನನಗೆ ಕತ್ತೆಬೆನ್ನೂರಿನಲ್ಲಿ ಸಂಬಂಧಿಕರು ಇದ್ದಾರೆ. ಅವರ ಮನೆಗೆ ಹೋಗಿ-ಬರುವಾಗ ಪ್ರತಿವಾದಿಯ ಪರಿಚಯವಾಯಿತು. ಕತ್ತೆಬೆನ್ನೂರಿನಲ್ಲಿ ನನ್ನ ಅತ್ತಿಗೆಯ ಮಾವನ ಮನೆ ಇರುತ್ತದೆ. ಸಾಕ್ಷಿ ಹೇಳಲು ನಾನೇ ಸ್ವಂತವಾಗಿ ಬಂದಿದ್ದೇನೆ. ಈ ದಿನಾಂಕಕ್ಕೆ ಒಂದೂವರೆ ತಿಂಗಳ ಹಿಂದೆ ಪ್ರತಿವಾದಿ ಚನ್ನಬಸಪ್ಪನು ನನಗೆ 2017 ರಲ್ಲಿ ನಡೆದಿದ್ದ ಸಾಲದ ವ್ಯವಹಾರದ ಬಗ್ಗೆ ತಿಳಿಸಿದ್ದರು. ಪ್ರತಿವಾದಿಯೇ ನನಗೆ ಆ ವ್ಯವಹಾರದ ಬಗ್ಗೆ ತಿಳಿಸಿದನೇ? ಎಂದರೆ ಇಲ್ಲ, ನನಗೆ ವ್ಯವಹಾರದ ಬಗ್ಗೆ ಸ್ವಂತ ಮಾಹಿತಿ ಇರುತ್ತದೆ. ಪ್ರತಿವಾದಿಯು ದಿನಾಂಕ 10.01.2017 ರಂದು ರೂ. 1 ಲಕ್ಷ ಸಾಲ ಕೇಳಿದ್ದನು. ಪ್ರಮಾಣ ಪತ್ರದಲ್ಲಿ ದಿನಾಂಕ 10.01.2017 ರಂದು ಕ್ರಯದ ಕರಾರು ಬರೆದು ಕೊಟ್ಟನು ಎಂದು ಬರೆಯಿಸಿದ್ದೇನೆ ಎಂದರೆ ಸಾಲವನ್ನು ಆ ದಿನಾಂಕಕ್ಕಿಂತ ಒಂದು ದಿನ ಮುಂಚೆ ಕೇಳಿದ್ದರು. ಸದರಿ ರೂ. 1 ಲಕ್ಷ ಸಾಲವನ್ನು ಪ್ರತಿವಾದಿಗೆ ವಾದಿಯು ಪತ್ರ ನೋಂದಣೆ ಆದ ಕೂಡಲೇ ಕೊಡಲಿಲ್ಲ ಅದಕ್ಕೆ ಬದಲಾಗಿ ವಾದಿಯು ಗುತ್ತಲ ಗ್ರಾಮದಲ್ಲಿ ನನ್ನ ಅಳಿಯ ಎನ್. ಹೆಚ್. ಪಾಟೀಲ ಇದ್ದಾನೆ, ಅವನ ಬಳಿಗೆ ಹೋಗಿ ಪಡೆದುಕೊಳ್ಳುವಂತೆ ಹೇಳಿ ಪ್ರತಿವಾದಿಯನ್ನು ಗುತ್ತಲ ಗ್ರಾಮಕ್ಕೆ ಕಳುಹಿಸಿದ್ದರು. ಇದೇ ಸಂಗತಿಯನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದೀನಾ ? ಎಂದರೆ ಬರೆಯಿಸಿದ್ದೇನೆ. ಸಬ್ ರಿಜಿಸ್ಟ್ರಾರ್ ಕಚೇರಿಗೆ ಯಾರು ಯಾರು ಹೋಗಿದ್ದಿರಿ? ಎಂದರೆ ವಾದಿ, ಪ್ರತಿವಾದಿ, ಬಸವರಾಜ ವಕೀಲರು, ತಿಮ್ಮಲಾಪುರ ಹರಿಜನ ನಿಂಗಪ್ಪ, ಮಕರಬ್ಬಿ ಶಂಕರಪ್ಪ ಮತ್ತು ನಾನು ಇಷ್ಟು ಜನ ಹೋಗಿದ್ದೆವು. ಅವರಲ್ಲಿ ಕತ್ತೆಬೆನ್ನೂರು ಗ್ರಾಮದವರು ಯಾರೂ ಇರಲಿಲ್ಲವೇ? ಎಂದರೆ ಬಸವರಾಜ ವಕೀಲರು ಮತ್ತು ಪ್ರತಿವಾದಿ ಕತ್ತೆಬೆನ್ನೂರು ಗ್ರಾಮದವರು.

02. ಪ್ರತಿವಾದಿಗೆ ಆತನ ಗ್ರಾಮದಲ್ಲಿ ಸಾಕಷ್ಟು ಪರಿಚಯಸ್ಥರು ಮತ್ತು ಬೆಂಬಲಿಗರು ಇದ್ದರು ಎಂದರೆ ಸರಿ. ಎ.ಪಿ.ಎಂ.ಸಿ. ಚುನಾವಣೆ ಖರ್ಚಿಗಾಗಿ ರೂ. 1 ಲಕ್ಷ ಬೇಕಿತ್ತು ಎಂದು ನಾನು ಹೇಳಿದ್ದು, ಚುನಾವಣೆಗೆ ಎಷ್ಟು ಖರ್ಚು-ವೆಚ್ಚ ಬರುತ್ತದೆ ಎಂದು ನನಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ. ನಮ್ಮ ಸಮಕ್ಷಮದಲ್ಲಿ ಪ್ರತಿವಾದಿಗೆ ರೂ. 1 ಲಕ್ಷ ಕೊಡಲು ಒಪ್ಪಿದನು ಎಂದು ಪ್ರಮಾಣ ಪತ್ರದಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನಾನು ಎಲ್ಲಿ ಇದ್ದೆ? ಎಂದರೆ ಪತ್ರ ಬರೆಯುವ ಸ್ಥಳದಲ್ಲಿ ಇದ್ದೆ. ನಾನು ಸಬ್ ರಿಜಿಸ್ಟ್ರಾರ್ ಕಚೇರಿಯ ಒಳಗಡೆ ಹೋಗಿದ್ದುಂಟೇ? ಎಂದರೆ ಹೋಗಿದ್ದೆ. ಪತ್ರಕ್ಕೆ ಸಹಿಗಳನ್ನು ಮೊದಲು ವಾದಿ ಮತ್ತು ಪ್ರತಿವಾದಿ ಮಾಡಿದರು ನಂತರ ಸಾಕ್ಷಿ ಸಹಿಗಳನ್ನು ಬಸವರಾಜ ವಕೀಲರು ಮತ್ತು ಹರಿಜನ ನಿಂಗಪ್ಪ ಮಾಡಿದರು. ಪತ್ರ ಬರಹಗಾರ ಟಿ ನಿಂಗಪ್ಪ ಸಹಿ ಮಾಡಿದರು. ಸದರಿ ಸಹಿಯನ್ನು ಎ.ಪಿ.ಎಂ.ಸಿ ಚುನಾವಣೆ ಖರ್ಚಿಗೆ ರೂ. 1 ಲಕ್ಷ ಪಡೆಯುವ ಸಲುವಾಗಿಯೇ ಮಾಡಿದ್ದರು. ನಾನು ನೋಂದಣೆ ಖರೀದಿ ಪತ್ರ ಬರೆದುಕೊಟ್ಟಿದ್ದಾನೆ ಎಂದು ಮತ್ತು ಎ.ಪಿ.ಎಂ.ಸಿ ಚುನಾವಣೆಗೆ ರೂ. 1 ಲಕ್ಷ ಸಾಲ ಪಡೆದಿದ್ದನು ಎಂದೂ ಕೂಡಾ ಹೇಳುತ್ತಿದ್ದು ಯಾವುದು ನಿಜವಾದ ಹೇಳಿಕೆ? ಎಂದರೆ ಎ.ಪಿ.ಎಂ.ಸಿ ಸಾಲಕ್ಕಾಗಿಯೇ ಕರಾರು ಪತ್ರ ಬರೆದುಕೊಟ್ಟಿದ್ದಾರೆ. ನಾನು ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಲಿಲ್ಲವೇ? ಎಂದರೆ ಸಬ್ ರಿಜಿಸ್ಟ್ರಾರ್ ರವರು ಇಬ್ಬರು ಸಾಕ್ಷಿಗಳ ಸಹಿ ಮಾತ್ರ ಸಾಕು ಎಂದು ಹೇಳಿದ್ದರಿಂದ ನಾನು ಸಾಕ್ಷಿ ಸಹಿ ಮಾಡಲಿಲ್ಲ. ನನಗೆ ಪತ್ರ ಬರೆದುಕೊಡುವ ಮುಂಚೆಯೇ ರೂ. 1 ಲಕ್ಷ ಸಾಲಕ್ಕಾಗಿ ಕರಾರು ಪತ್ರ

ಬರೆದುಕೊಡಲಿದ್ದಾರೆ ಎಂದು ಗೊತ್ತಿತ್ತು ಎಂದರೆ ಸರಿ. ಆದ್ದರಿಂದ ನಾನು ಸಾಕ್ಷಿಯಾಗಿ ಕರಾರು ಪತ್ರಕ್ಕೆ ನಾನೂ ಕೂಡಾ ಸಹಿ ಮಾಡುತ್ತೇನೆ ಎಂದು ಹೇಳಿದ್ದುಂಟೇ? ಎಂದರೆ ಹೇಳಿದ್ದೆ. ಸದರಿ ದಿನಾಂಕದಂದು ನಾನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿರಲೂ ಇಲ್ಲ ಮತ್ತು ನನಗೆ ಈ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿಯೂ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಆತ್ಮೀಯನಾಗಿರುವ ಕಾರಣ ಆತ ಕೇಳಿಕೊಂಡ ಪ್ರಕಾರ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಡಿ.ಡಬ್ಲ್ಯೂ-2 ಇಬ್ಬರೂ ಒಂದೇ ರೀತಿ ಇರುವ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವ ಕಾರಣ ಪ್ರತಿವಾದಿ ಹೇಳಿ ತಯಾರಿಸಿದ ಪ್ರಮಾಣ ಪತ್ರಗಳಿಗೆ ಸಹಿ ಮಾಡಿ ಆ ಪ್ರಕಾರ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 10.01.2017 ರಂದು ಪ್ರತಿವಾದಿಯು ರೂ. 6 ಲಕ್ಷಕ್ಕೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ರೂ. 5 ಲಕ್ಷ ಮುಂಗಡವಾಗಿ ಪಡೆದು ವಾದಿಗೆ ನೋಂದಣಿ ಕರಾರು ಪತ್ರ ಬರೆದು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸರ್ವೇ ನಂ. 31 ಇದ್ದು ಅದು 2 ಎಕರೆ 70 ಸೆಂಟ್ಸ್ ಇರುತ್ತದೆ. ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ರೂ. 50 ಲಕ್ಷ ಬೆಲೆ ಬಾಳುತ್ತದೆ ಎಂದು ತೋರಿಸುವ ದಾಖಲೆ ಹಾಜರು ಮಾಡಿದ್ದೀರಾ? ಎಂದರೆ ಮಾಡಿಲ್ಲ. ದಾವಾ ಸ್ವತ್ತಿನ ಆಜು-ಬಾಜುವಿನಲ್ಲಿರುವ ಜಮೀನುಗಳು ಎಷ್ಟು ಮೊತ್ತಕ್ಕೆ ಮಾರಾಟವಾಗಿವೆ ಎಂಬ ಬಗ್ಗೆ ನನಗೆ ಮಾಹಿತಿ ಇದೆಯೇ? ಎಂದರೆ ಗ್ರಾಮದಲ್ಲಿ ಜಮೀನುಗಳಿಗೆ ಡಿಮ್ಯಾಂಡ್ ಇದೆ ಎಂದು ಮಾತನಾಡುವುದನ್ನು ಕೇಳಿದ್ದೇನೆ. ಆ ರೀತಿ ಭೂಮಿಗೆ ಡಿಮ್ಯಾಂಡ್ ಇದೆ ಎಂದು ಗ್ರಾಮಸ್ಥರು ಮಾತನಾಡುತ್ತಾರೆ. ನನಗೆ ದಾವಾ ಸ್ವತ್ತು ಮತ್ತು ದಾವಾ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ನಾನು ಮತ್ತು ಡಿ.ಡಬ್ಲ್ಯೂ-2 ಇಬ್ಬರೂ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿಲ್ಲವಾದ್ದರಿಂದ ನನ್ನ ಸಾಕ್ಷಿ ಹೇಳಿಕೆಗೆ ಯಾವುದೇ ಮಹತ್ವವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಹೂವಿನ ಹಡಗಲಿ.**

ದಿನಾಂಕಃ **30.08.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ **ಬೋಧಿಸಲಾಯಿತು.**

ಪಾಟೀ ಸವಾಲು : ವಾದಿಯ ಪರ ವಕೀಲರಿಂದಃ

01. ನನ್ನ ಸ್ವಂತ ಊರು ಬೆಳವಿಗಿ ಇರುತ್ತದೆ. ನಾನು ಬಿ.ಕಾಂ. ಪದವೀಧರನಿರುತ್ತೇನೆ. ನನ್ನ ಪ್ರಮಾಣ ಪತ್ರವನ್ನು ನಾನೇ ಸ್ವಂತವಾಗಿ ಹೇಳಿ ಬರೆಯಿಸಿದ್ದೇನೆ. ನಾನು ಪ್ರಮಾಣ ಪತ್ರವನ್ನು ಯಾವ ಜಾಗದಲ್ಲಿ ಬರೆಯಿಸಿದೆ? ಮತ್ತು ಅದರಲ್ಲಿ ಏನು ಹೇಳಿ ಬರೆಯಿಸಿದ್ದೆ? ಎಂದರೆ ಸಾಕ್ಷಿಯು ಇಲ್ಲೇ ಕೋರ್ಟಿನ ಹತ್ತಿರ ವಕೀಲರಿಗೆ ಹೇಳಿ ಬರೆಯಿಸಿದ್ದೆ ಎಂದು ಉತ್ತರಿಸಿದ್ದಾರೆ. ನನ್ನ ಪ್ರಮಾಣ ಪತ್ರ ಬರೆಯಿಸುವಾಗ ಇನ್ನೂ ಯಾರು ಯಾರು ಇದ್ದರು? ಎಂದರೆ ನಾನು ಮತ್ತು ವಕೀಲರು ಮಾತ್ರ ಇದ್ದೆವು. ನಾನು ನಮ್ಮ ಊರಿನಲ್ಲಿ ಲ್ಯಾಂಡ್ ಟ್ರಿಬ್ಯೂನಲ್ ಸದಸ್ಯ ಕೂಡಾ ಆಗಿದ್ದೇನೆ ಎಂದರೆ ಸರಿ. ನಾನು ಆಗಾಗ ಪೊಲೀಸ್ ಠಾಣೆಗೆ ಹೋಗಿ-ಬರುವುದು ಮಾಡುತ್ತೇನೆ ಎಂದರೆ ಠಾಣೆಗೆ ಹೋಗುವುದಿಲ್ಲ, ಏನಾದರೂ ಇದ್ದರೆ ಕುಂತು ರಾಜಿ ಮಾಡಿಸುತ್ತೇನೆ. ಸಾಕ್ಷಿ ಹೇಳಲು ನನ್ನನ್ನು ಯಾರು ಕರೆ ತಂದಿದ್ದಾರೆ? ಎಂದರೆ ನಾನೇ ಬಂದಿದ್ದೇನೆ. ನನಗೆ ದಾವಾ ಬಗ್ಗೆ ಸ್ವಂತ ಮಾಹಿತಿ ಇತ್ತೇ? ಎಂದರೆ ಹೌದು.

02. ಪ್ರತಿವಾದಿ ಚನ್ನಬಸಪ್ಪ ವಾದಿ ಕೊಟ್ರಪ್ಪನನ್ನು ಯಾವ ದಿನಾಂಕದಂದು ಸಾಲ ಕೇಳಿದ್ದರು? ಎಂದರೆ ದಿನಾಂಕ 10.01.2017 ರಂದು ಸಾಲ ಕೇಳಿದ್ದರು. ನನಗೆ ಸದರಿ ಸಾಲವನ್ನು ಯಾವ ದಿನಾಂಕದಂದು ಕೇಳಿದ್ದರು ಎಂಬ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದರೆ ಸರಿಯಲ್ಲ. ನಾನು ಹೇಳುತ್ತೇನೆ, ನನ್ನ ಎದುರಿಗೆ ಸಾಲ ಕೇಳಿದ್ದು ಮತ್ತು ಸಾಲ ಕೊಟ್ಟಿದ್ದು ಯಾವುದೇ ಘಟನೆ ನಡೆದಿರಲಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ದಿನಾಂಕ 10.01.2017 ರಂದು ಪ್ರತಿವಾದಿಯು ವಾದಿಗೆ ನೋಂದಾಯಿತ ಕರಾರು ಪತ್ರ ಬರೆದುಕೊಟ್ಟಿದ್ದನು ಎಂದು ಬರೆಯಿಸಿರುವುದು ನಿಜವೇ ? ಎಂದರೆ ನಿಜವಿರುತ್ತದೆ. ಸದರಿ ಕರಾರು ಪತ್ರ ನೋಂದಣೆಯಾಗುವಾಗ ನೀವೂ ಕೂಡಾ ಹಾಜರಿದ್ದುಂಟೇ? ಎಂದರೆ ನಾನೂ ಕೂಡಾ ಹಾಜರಿದ್ದೆ ಆದರೆ ಸಬ್ ರಿಜಿಸ್ಟ್ರಾರ್ ಕಚೇರಿಯ ಹೊರಗಡೆ ಇದ್ದೆ. ನನ್ನ ಪ್ರಮಾಣ ಪತ್ರದಲ್ಲಿ ಕರಾರು ಪತ್ರವನ್ನು ನನಗೆ ಓದಲಿಕ್ಕೆ ವಾದಿ, ಪತ್ರ ಬರಹಗಾರ ಮತ್ತು ಸಬ್ ರಿಜಿಸ್ಟ್ರಾರ್ ಇವರುಗಳು ಅವಕಾಶ ಕೊಡಲಿಲ್ಲ ಎಂದು ಹೇಳಿದ್ದೀನಾ? ಎಂದರೆ ಹೌದು, ಚನ್ನಬಸಪ್ಪ ಮತ್ತು ಹರಿಜನ ನಿಂಗಪ್ಪ ಎನ್ನುವವರು ನಾನು ಸಾಕ್ಷಿ ಸಹಿ ಮಾಡುತ್ತೇನೆ ಎಂದರೆ ಬೇಡ ಇಬ್ಬರು ಸಾಕ್ಷಿಗಳು ಸಾಕಾಗುತ್ತಾರೆ ಎಂದು ಹೇಳಿದ್ದರು.

03. ದಾವಾ ಸ್ವತ್ತಿನ ಸರ್ವೇ ನಂ. 31 ಬಿ ನಲ್ಲಿ 2 ಎಕರೆ 70 ಸೆಂಟ್ಸ್ ಇರುತ್ತದೆ. ಅದರ ಚೆಕ್ಕುಬಂದಿ ಬಗ್ಗೆ ನನಗೆ ಐಡಿಯಾ ಇಲ್ಲ. ಎ.ಪಿ.ಎಂ.ಸಿ ಚುನಾವಣೆ ದಿನಾಂಕ 12.01.2017 ರಲ್ಲಿ ನಿಗದಿಯಾಗಿತ್ತು. ಎ.ಪಿ.ಎಂ.ಸಿ ಚುನಾವಣೆಗೆ ಆಗುವ ಖರ್ಚು-ವೆಚ್ಚಗಳ ಬಗ್ಗೆ ಮಾಹಿತಿ ಇದೆಯೇ? ಎಂದರೆ ಸದರಿ ಖರ್ಚು-ವೆಚ್ಚವನ್ನು ರೂ. 15 ಸಾವಿರಕ್ಕೂ ಮುಗಿಸಬಹುದು ರೂ. 10 ಲಕ್ಷದವರೆಗೂ ಖರ್ಚು ಮಾಡಬಹುದು. ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಖರ್ಚು ಮಾಡುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಕರಾರು ಪತ್ರಕ್ಕೆ ಸಾಕ್ಷಿ ಸಹಿ ಮಾಡಲು ಸಬ್ ರಿಜಿಸ್ಟ್ರಾರ್ ಅವಕಾಶ ಮಾಡಿ ಕೊಡಲಿಲ್ಲ ಎಂದು ಹೇಳಿರುವುದು ನಿಜವೇ? ಅಥವಾ ಪಾಟೀಸವಾಲಿನಲ್ಲಿ ನಾನು ಸಬ್ ರಿಜಿಸ್ಟ್ರಾರ್ ಕಚೇರಿಯ ಹೊರಗಡೆ ನಿಂತಿದ್ದೆ ಎಂದು ಹೇಳಿರುವುದು ನಿಜವೇ? ಎಂದರೆ ಸಬ್ ರಿಜಿಸ್ಟ್ರಾರ್ ರವರು ನನ್ನನ್ನು ಸಾಕ್ಷಿ ಸಹಿ ಮಾಡಲು ತಡೆಯಲಿಲ್ಲ. ಇಬ್ಬರ ಸಹಿ ಮಾತ್ರ ಸಾಕು ಎಂದು ಹೇಳಿದವರು ಬಸವರಾಜಪ್ಪ ಮತ್ತು ನಿಂಗಪ್ಪ ಇರುತ್ತಾರೆ. ನಾನು ಆ ದಿನ ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿರಲೂ ಇಲ್ಲ ಮತ್ತು ನಾನು

ಹೇಳುವಂತೆ ಯಾರೂ ನನ್ನ ಸಾಕ್ಷಿ ಸಹಿ ಬೇಡವೆಂದು ಹೇಳಿರಲೂ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸಂಬಂಧಿಕ ಎಂದರೆ ಅಲ್ಲ, ಪರಿಚಯಸ್ಥ ಮಾತ್ರ. ವಾದಿಯು ಪ್ರತಿವಾದಿಗೆ ರೂ. 1 ಲಕ್ಷ ಸಾಲವನ್ನು ಗುತ್ತಲ ಗ್ರಾಮದಲ್ಲಿ ಕೊಟ್ಟಿದ್ದರು. ಆ ಹಣವನ್ನು ಕೊಡುವಾಗ ಯಾರು ಯಾರು ಹಾಜರಿದ್ದರು? ಎಂದರೆ ಸಾಕ್ಷಿಯು ಸದರಿ ಸಾಲದ ಹಣವನ್ನು ಪ್ರತಿವಾದಿ ಖುದ್ದಾಗಿ ಪಡೆದಿರಲಿಲ್ಲ, ಪ್ರತಿವಾದಿಯ ಹಿಂಬಾಲಕರು ಗುತ್ತಲ ಗ್ರಾಮಕ್ಕೆ ಹೋಗಿ ವಾದಿಯಿಂದ ಆ ಹಣವನ್ನು ಪಡೆದಿದ್ದರು ಎಂದು ಹೇಳಿದ್ದಾರೆ. ಪ್ರಮಾಣ ಪತ್ರದಲ್ಲಿ ಪ್ರತಿವಾದಿಯ ಹಿಂಬಾಲಕರು ಗುತ್ತಲ ಗ್ರಾಮಕ್ಕೆ ಹೋಗಿ ವಾದಿಯಿಂದ ಸಾಲ ಪಡೆದಿದ್ದರು ಎಂದು ನಾನು ಹೇಳಿ ಬರೆಯಿಸಿದ್ದೀನಾ? ಎಂದರೆ ಬರೆಯಿಸಿಲ್ಲ, ಆದರೆ ಅದು ನಿಜವಿರುತ್ತದೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ರೂ 1 ಲಕ್ಷ ಸಾಲ ಪಡೆದು ಅದರ ಭದ್ರತೆಗಾಗಿ ಕರಾರು ಪತ್ರ ಬರೆದುಕೊಟ್ಟಿದ್ದಾನೆಂದು ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ನಾನು ಸಾಕ್ಷಿಯಾಗಿ ಇರಲಿಲ್ಲವಾದ್ದರಿಂದ ನನ್ನ ಸಾಕ್ಷಿ ಹೇಳಿಕೆಗೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ದಿನಾಂಕ 10.01.2017 ರಂದು ರೂ. 6 ಲಕ್ಷಕ್ಕೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿ ರೂ. 5 ಲಕ್ಷ ಮುಂಗಡವಾಗಿ ಪಡೆದು ವಾದಿಗೆ ಸಾಕ್ಷಿದಾರರ ಸಮಕ್ಷಮ ನೋಂದಾಯಿತ ಕರಾರು ಪತ್ರವನ್ನು ಬರೆದು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂಧಿಕನಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.